ತೆಗೆದುಕೊಂಡು ಕುಡಿಯುವ ನೀರಿನ ಪೂರೈಕೆಗಾಗಿ ಕೈಗೊಳ್ಳಲಿರುವ ಯೋಜನೆಗಳ ವಿವರ ನೀಡುವುದು.

ಉತ್ತರ

1. ಕಾವೇರಿ 1, 2 ಮತ್ತು 3ನೇ ಹಂತದ ಯೋಜನೆಗಳಿಂದ ನಗರಕ್ಕೆ ಪ್ರತಿದಿನವೂ ಸುಮಾರು 540 ದಶಲಕ್ಷ ಲೀಟರ್‌ನಷ್ಟು ನೀರನ್ನು ಸರಬರಾಜು ಮಾಡಲಾಗುತ್ತಿದೆ.

2. ಈ ಯೋಜನೆಯ ವಿವಿಧ ಕೆಲಸಗಳು ಪ್ರಗತಿಯಲ್ಲಿದೆ.

3. ಈ ಯೋಜನೆಯ ಅಂದಾಜು ವೆಚ್ಚ ರೂ.1072.00 ಕೋಟಿ ರೂ.ಗಳು.

4. 270 ದಶಲಕ್ಷ ಲೀಟರ್‌ನ್ನು ಪ್ರತಿ ದಿನವೂ ಅಧಿಕವಾಗಿ ಬೆಂಗಳೂರಿಗೆ ಪೂರೈಸಲಾಗುವುದು.

5. ಬೆಂಗಳೂರು ನಗರದ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ನೀರಿನ ಬೇಡಿಕೆಯನ್ನು ಗಮನಿಸಿ, 2006ನೇ ಇಸವಿ ವೇಳೆಗೆ ಕಾವೇರಿ 4ನೇ ಘಟ್ಟ 2ನೇ ಹಂತದ ಕೆಲಸಗಳನ್ನು ಪ್ರಾರಂಭಿಸಿ ಇಸವಿ 2011ರ ವರೆಗೆ ಸುಮಾರು 500 ದಶಲಕ್ಷ ಲೀಟರ್ ನೀರನ್ನು ಪ್ರತಿ ನಿತ್ಯವೂ ಪೂರೈಸಲು ಉದ್ದೇಶಿಸಲಾಗಿದೆ. ಈ ಯೋಜನೆಯ ವೆಚ್ಚ ಸುಮಾರು 3670 ಕೋಟಿ ರೂ.ಗಳು.

ಬೆಂಗಳೂರು ನಗರದಲ್ಲಿ ಕೇಂದ್ರದ ನೆರವಿನಿಂದ ಮೆಟ್ರೋ ರೈಲು ಸಂಚಾರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 85(173)

ಸದಸ್ಯರ ಹೆಸರು: ಶ್ರೀ ರಾಮಲಿಂಗಾರೆಡ್ಡಿ(ಜಯನಗರ)

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು)

ಪ್ರಶ್ನೆ

1) ಕೇಂದ್ರ ಸರ್ಕಾರವು ಮೆಟ್ರೊ ರೈಲು ಸಂಚಾರ ಯೋಜನೆಗೆ ಆರ್ಥಿಕ ನೆರವು ನೀಡಲು ಮುಂದೆ ಬಂದಿದೆಯೆ?

2) ಈ ಯೋಜನೆಯನ್ನು ಕಾರ್ಯಗತಗೊಳಿಸಲು ರಾಜ್ಯ ಸರ್ಕಾರ ಕೈಗೊಂಡ

ಕ್ರಮಗಳೇನು?

ಉತ್ತರ

1) ಇಲ್ಲ.

2) ಮೆ: ರೈಟ್ಸ್ ಕಂಪನಿಯವರಿಗೆ ಈ ಯೋಜನೆಯ ಸಂಭವನೀಯ ವರದಿಯನ್ನು ನೀಡಲು ವಹಿಸಲಾಗಿದೆ. ಈ ಸಂಭವನೀಯ ವರದಿಯು ಬಂದ ನಂತರ ರಾಜ್ಯ ಸರ್ಕಾರದ ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗುವುದು. ಮೆಟ್ರೊ ರೈಲು ಯೋಜನೆಗೆ ಹಣವನ್ನು ಭಾರತ ಸರ್ಕಾರದ ನಿಯಮಾವಳಿಯಂತೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು 1:3 ಮತ್ತು 2:3ರ ಅನುಪಾತದಲ್ಲಿ ಪೆಚ್ಚವನ್ನು ಭರಿಸುತ್ತದೆ.

ನಗರಸಭೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿ ಶುಲ್ಕ ತೆಗೆದುಕೊಳ್ಳದೇ ಇರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 86(177)

ಸದಸ್ಯರ ಹೆಸರು: ಶ್ರೀ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು(ಶಿವಾಜಿನಗರ)

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಯವರು)

ಪ್ರಶ್ನೆ

1. ಬೆಂಗಳೂರು ಜಲ ಮಂಡಲಿ ಡಿಸೆಂಬರ್ 2001ರಿಂದ ಬೆಂಗಳೂರು ನಗರದಲ್ಲಿ ನೀರಿನ ದರಗಳನ್ನು ಏರಿಸಿದೆಯೇ?

2. ಹಾಗಿದ್ದಲ್ಲಿ ಇದರ ಪೂರ್ಣ ವಿವರಗಳನ್ನು ನೀಡುವುದು.

3. ಈ ನೀರಿನ ದರಗಳನ್ನು ಏರಿಸಲು ಕಾರಣಗಳೇನು?

4. ನೀರಿನ ದರಗಳ ಏರಿಕೆಯಿಂದ ಬರತಕ್ಕ ಅಂದಾಜು ಹೆಚ್ಚಿನ ವರಮಾನವೆಷ್ಟು?

5. ನೀರಿನ ಸೋರಿಕೆ ಹಾಗೂ ಅನಧಿಕೃತ ನೀರಿನ ಸಂಪರ್ಕ ಹಾಕಿಕೊಂಡಿರುವುದರ ಬಗ್ಗೆ ಕಠಿಣ ಕ್ರಮ ಕೈಗೊಂಡು ನೀರಿನ ದರದ ಏರಿಕೆಯನ್ನು ಕಡಿಮೆ ಮಾಡಬಹುದಲ್ಲವೇ?